ದಿನಾಂಕ 22-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯ ಪರ ಶ್ರೀ ಎಫ್. ಬಿ.ಎಂ ವಕೀಲರಿಂದಃ**

1. ನನ್ನ ಜನ್ಮ ದಿನಾಂಕಃ 01-06-1987. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಯ ಪೂರ್ವಕ್ಕೆ ಪಂಚಾಯತಿ ರಸ್ತೆ ಇದೆ. ಪಶ್ಚಿಮಕ್ಕೆ ಶಿವಕ್ಕ ಕೋಂ ಶಾಂತಪ್ಪ ಚೆನ್ನಗೌಡ್ರರವರ ಜಮೀನು ಮತ್ತು ಶೇಖಪ್ಪ ಹಂಚಿನಮನಿರವರ ಮನೆ ಇದೆ ಎಂದರೆ ಸರಿ. ದಾವಾ ಆಸ್ತಿಯ ದಕ್ಷಿಣಕ್ಕೆ ನಾಗಪ್ಪ ಹೊಂಡಪ್ಪ ಬಾಳಗೊಂಡರವರ ಆಸ್ತಿ ಇದೆ ಎಂದರೆ ಸರಿ. ನಾಗಪ್ಪ ಬಾಳಗೊಂಡರವರ ಸದರಿ ಆಸ್ತಿ ಮೊದಲಿಗ ಫಕ್ಕಿರಪ್ಪ ತಳವಾರ ಅವರ ಆಸ್ತಿಯಾಗಿತ್ತು ಮತ್ತು ಅವರಿಂದ ಅದನ್ನು ಆತನು ಖರೀದಿ ಮಾಡಿರುತ್ತಾನೆ ಎಂದರೆ ಸರಿ . ದಾವಾ ಆಸ್ತಿಯ ಉತ್ತರಕ್ಕೆ ಈ ದಾವೆಯ ಆಸ್ತಿ ಇದೆ ಎಂದರೆ ಸಾಕ್ಷಿಯು ಉತ್ತರಕ್ಕೆ ಇರುವ ಆಸ್ತಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಯು ವಾದಿಯ ಹೆಸರಿನಲ್ಲಿದ್ದು ಆದರೆ ಅದರ ವಹಿವಾಟನ್ನು ಸಿದ್ದಪ್ಪ ತಂದೆ ಅಜ್ಜಪ್ಪ ಹಾದಿಮನಿ ಎಂಬುವವರು ವಹಿವಾಟು ಮಾಡುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಉತ್ತರಕ್ಕೆ ಇರುವ ಆಸ್ತಿಯನ್ನು ಸಿದ್ದಪ್ಪ ಹಾದಿಮನಿರವರು ವಹಿವಾಟು ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಹೋತನಹಳ್ಳಿ ಗ್ರಾಮದ ಸರ್ವೆ ನಂ. 90 ಅ /6 ರ ಜಮೀನು ಮೂಲತಃ ವಾದಿಯ ತಂದೆಯಾದ ಮಲ್ಲನಗೌಡ ಪಾಟೀಲರವರ ಮಾಲೀಕತ್ವಕ್ಕೆ ಸೇರಿದ ಜಮೀನು ಎಂದರೆ ಸರಿ. ವಾದಿಗೆ ಅನ್ನಪೂರ್ಣ ಎಂಬ ತಂಗಿ ಇರುತ್ತಾಳೆ ಎಂದರೆ ಸರಿ. ವಾದಿ ಮತ್ತು ಅನ್ನಪೂರ್ಣರವರನ್ನು ಹೊರತುಪಡಿಸಿ ಮಲ್ಲನಗೌಡ ಪಾಟೀಲ ಮತ್ತು ಆತನ ಹೆಂಡತಿ ನಿಂಬವ್ವರವರಿಗೆ ಇತರ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಇರುವುದಿಲ್ಲ ಎಂದರೆ ಸರಿ. ಸದರಿ ಮಲ್ಲನಗೌಡ ಪಾಟೀಲ ಮರಣ ಹೊಂದಿದ ಕಾರಣಕ್ಕೆ ಸರ್ವೆ ನಂ. 90 ಅ/6 ವಿಸ್ತೀರ್ಣ 05 ಎಕರೆ 14 ಗುಂಟೆ ಜಮೀನನ್ನು ವಾದಿ, ಆಕೆಯ ಸಹೋದರಿ

ಅನ್ನಪೂರ್ಣ  ಮತ್ತು ತಾಯಿ ನಿಂಬವ್ವ ವಾರಸಾ ಪ್ರಕಾರ ವಹಿವಾಟು ಮಾಡುತ್ತಿದ್ದರು ಎಂದರೆ ಸರಿ. ಸದರಿ ಜಮೀನು ಮತ್ತು ಇತರ ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ಅನ್ನಪೂರ್ಣರವರು ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು, ಹಾನಗಲ್ಲ ನ್ಯಾಯಾಲಯದಲ್ಲಿ ಅಸಲು ದಾವಾ ನಂ. 718/2002 ರ ದಾವೆಯನ್ನು ಸಲ್ಲಿಸಿದ್ದಳು ಎಂದರೆ ಸರಿ. ಸದರಿ ದಾವೆಯಲ್ಲಿ ಆದ ರಾಜಿ ಪ್ರಕಾರ ಸರ್ವೆ ನಂ.  90 ಅ/6  ಕ್ಷೇತ್ರ 05 ಎಕರೆ 14 ಗುಂಟೆ ವಾದಿಯ ಹೆಸರಿಗೆ  ಬಂದಿತ್ತು ಎಂದರೆ ಸರಿ.

3.  ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ವರ್ಗಾಣೆಗಳು  ಮತ್ತು ವ್ಯವಹಾರಗಳು ಗ್ರಾಮದ ಹಿರಿಯರ ಮುಂದೆ ಆಗುತ್ತವೆ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಿಂಬವ್ವರವರು 1 ನೇ ಪ್ರತಿವಾದಿಯ ಹೆಸರಿಗೆ  ಬರೆದುಕೊಟ್ಟಿದ್ದಾರೆ ಎಂದು ಆಧರಿಸುವ ದಾಖಲೆಯನ್ನು ಯಾರು ಬರೆದಿರುತ್ತಾರೆ ಎಂದು ನಾನು ನೋಡಿರುವುದಿಲ್ಲ. ಸದರಿ ವ್ಯವಹಾರದ ಸಮಯಕ್ಕೆ ನಾನು  ಸುಮಾರು 17-18 ವರ್ಷ ವಯಸ್ಸು ಇದ್ದರಿಂದ ಹಾಗೂ ಚಿಕ್ಕವನು ಇದ್ದ ಕಾರಣಕ್ಕೆ ವ್ಯವಹಾರದಲ್ಲಿ ನಾನು ಭಾಗವಹಿಸಿರುವುದಿಲ್ಲ. ಸದರಿ ಹಿಸ್ಸೆಯ ಪ್ರಕಾರ ಸರ್ವೆ ನಂ.  90 ಅ/6 ರ  ಜಮೀನು ವಾದಿಯ ಹೆಸರಿಗೆ ಬಂದ ನಂತರ ಅದರಲ್ಲಿ ವಾದಿಯು ವಾಸದ ಮನೆ, ದನದ ಶೆಡ್ ಮತ್ತು ಟ್ರ್ಯಾಕ್ಟರ ಶೆಡ್ ನ್ನು ನಿರ್ಮಿಸಿದ್ದಳು ಎಂದರೆ ಸರಿಯಲ್ಲ.

4. ಅವುಗಳನ್ನು ಹೊರತುಪಡಿಸಿ ವಾದಿಯು  ಮತ್ತೊಂದು ಆಸ್ತಿಯಲ್ಲಿ ವಾಸದ ಮನೆ , ದನದ  ಕೊಟ್ಟಿಗೆ ಮತ್ತು ಟ್ರ್ಯಾಕ್ಟರ ಶೆಡ್ ನ್ನು 2016 ರಲ್ಲಿ ನಿರ್ಮಿಸಿದ್ದಳು ಎಂದರೆ ಸರಿ. ಸದರಿ ಮತ್ತೊಂದು ಆಸ್ತಿಯಲ್ಲಿ ವಾಸದ ಮನೆ ,  ದನದ ಕೊಟ್ಟಿಗೆ ಮತ್ತು ಟ್ರ್ಯಾಕ್ಟರ ಶೆಡ್ ನ್ನು  ವಾದಿಯು ನಿರ್ಮಿಸಿದ್ದರಿಂದ, ದಾವಾ ಆಸ್ತಿಯಲ್ಲಿದ್ದ ವಾಸದ  ಮನೆ , ದನದ ಕೊಟ್ಟಿಗೆ ಮತ್ತು ಟ್ರ್ಯಾಕ್ಟರ  ಶೆಡ್ ನ್ನು  ದಿಃ 26-01-2017 ರಿಂದ ವಾದಿಯು 1 ನೇ ಪ್ರತಿವಾದಿಗೆ ಪರವಾನಿಗೆ ಆಧಾರದ ಮೇಲೆ ವಹಿವಾಟಿಗೆ ನೀಡಿದ್ದಳು ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ಇರುವ ಮನೆಗೆ ಆಸ್ತಿ ನಂ. 252 ಎಂದು ನೀಡಿದ್ದಾರೆ ಎಂದು ಆಧರಿಸಿದ್ದು, ಸದರಿ ಖಾತೆ ಮಾಡಲು ವರದಿ ಅರ್ಜಿಯನ್ನು 1 ನೇ ಪ್ರತಿವಾದಿಯು ನೀಡುವಾಗ ನಾನು ಆತನೊಂದಿಗೆ ಹೋಗಿರಲಿಲ್ಲ. ಕಬೂಲಿ ವರದಿಯನ್ನು ನೀಡುವಾಗಲೂ ಸಹ ನಾನು 1 ನೇ ಪ್ರತಿವಾದಿಯೊಂದಿಗೆ ಹೋಗಿರಲಿಲ್ಲ ಮತ್ತು ಯಾವುದೇ ದಾಖಲೆಗಳ ವ್ಯವಹಾರಕ್ಕೂ ನಾನು ಹೋಗಿರಲಿಲ್ಲ.

5. 2015 ರಲ್ಲಿ ಗ್ರಾಮ ಪಂಚಾಯತಿ ಸದಸ್ಯ ಸ್ಥಾನಕ್ಕೆ ನಾನು ಚುನಾವಣೆಗೆ ಸ್ಪರ್ಧಿಸಿದ್ದೆ ಎಂದರೆ ಸರಿ. ಆ ಚುನಾವಣೆಯಲ್ಲಿ ನನ್ನ ವಿರುದ್ದವಾಗಿ ವಾದಿಯ ಗಂಡ ಸ್ಪರ್ಧಿಸಿದ್ದನು ಎಂದರೆ ಸರಿ. ಸದರಿ ಚುನಾವಣೆಯಲ್ಲಿ ವಾದಿಯ ಗಂಡ ಗೆಲುವು ಪಡೆದಿದ್ದನು ಎಂದರೆ ಸರಿ. ಸದರಿ ಕಾರಣಕ್ಕೆ ಹಲವಾರು ವರ್ಷಗಳಿಂದ ನನ್ನ ಮತ್ತು ವಾದಿಯ ಕುಟುಂಬದ ನಡುವೆ ರಾಜಕೀಯ ದ್ವೇಷ ಇದೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಸಂಗತಿಗಳನ್ನು 1 ನೇ ಪ್ರತಿವಾದಿ ಅಥವಾ ಆತನ ಮಗ ಹೇಳಿ ಬರೆಸಿರುತ್ತಾನೆ ಎಂಬ ಸೂಚನೆಗೆ ಸಾಕ್ಷಿಯು ನನ್ನ ಮಾಹಿತಿಯಂತೆ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಸಂಗತಿಗಳೆಲ್ಲವೂ ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ವಾದಿಯ ಕುಟುಂಬದ ವಿರುದ್ದ ನನಗೆ ಇರುವ ರಾಜಕೀಯ ದ್ವೇಷದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಃ ಮರುವಿಚಾರಣೆ ಇರುವುದಿಲ್ಲಃ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ